## ಪ್ರಾರ್ಥನೆ

(ಶ್ರೀರಾಮಾನುಜರ ಶರಣಾಗತಿ ಗದ್ಯದಿಂದ)

ಮನೋ–ವಾಕ್–ಕಾಯೈಃ ಅನಾದಿಕಾಲ–ಪ್ರವೃತ್ತ–
ಅನನ್ತ–ಅಕೃತ್ಯಕರಣ–ಕೃತ್ಯಾಕರಣ –ಭಗವದಪಚಾರ–
ಭಾಗವತಾಪಚಾರ–ಅಸಹ್ಯಾಪಚಾರರೂಪ–ನಾನಾವಿಧ–
ಅನಂತಾಪಚಾರಾನ್–ಆರಬ್ಧಕಾರ್ಯಾನ್,
ಅನಾರಬ್ಧಕಾರ್ಯಾನ್, ಕೃತಾನ್, ಕ್ರಿಯಮಾಣಾನ್,
ಕರಿಷ್ಯಮಾಣಾಂಶ್ಚ ಸರ್ವಾನ್ ಅಶೇಷತಃ ಕ್ಷಮಸ್ವ ॥

ಅನಾದಿಕಾಲಪ್ರವೃತ್ತ–ವಿಪರೀತಜ್ಞಾನಂ ಆತ್ಮವಿಷಯಂ
ಕೃತ್ಸ್ನ–ಜಗದ್ವಿಷಯಂ ಚ ವಿಪರೀತವೃತ್ತಂ ಚ
ಅಶೇಷವಿಷಯಂ ಅದ್ಯಾಪಿ ವರ್ತಮಾನಂ
ವರ್ತಿಷ್ಯಮಾಣಂ ಚ ಸರ್ವಂ ಕ್ಷಮಸ್ವ ॥

ಅಂತ್ಯಕಾಲೇ ಸ್ಮೃತಿಃ ಯಾ ತು ತವ ಕೈಂಕರ್ಯ–ಕಾರಿತಾ ।
ತಾಮೇನಾಂ ಭಗವನ್ ಅದ್ಯ
ಕ್ರಿಯಮಾಣಾಂ ಕುರುಷ್ವ ಮೇ ॥

(ನನ್ನಿಂದಾಗಿರುವ) ಮಾಡಬಾರದ್ದನ್ನು ಮಾಡುವುದು, ಮಾಡಬೇಕಾದ್ದನ್ನು ಮಾಡದಿರುವುದು, ಭಗವದಪಚಾರ, ಭಾಗವತಾಪಚಾರ ಮತ್ತು (ಆಚಾರ್ಯರೇ ಮೊದಲಾದ ಯಾರಿಂದಲೂ) ಸಹಿಸಲಾಗದ ಅಪಚಾರ, ಎಂಬೀ ಬಗೆ ಬಗೆಯ ಅನಂತವಾದ ಅಪಚಾರಗಳು, ಮನಸ್ಸು ಮಾತು ಮತ್ತು ಶರೀರಗಳಿಂದ, ಅನಾದಿಕಾಲದಿಂದಲೂ ಘಟಿಸುತ್ತ ಬಂದಿವೆ. ಇವುಗಳನ್ನೂ, ಪ್ರಾರಂಭಿಸಿದ ಕಾರ್ಯಗಳನ್ನೂ, ಪ್ರಾರಂಭಿಸದ ಕಾರ್ಯಗಳನ್ನೂ, ಹಿಂದೆ ಮಾಡಿದ, ಈಗ ಮಾಡುತ್ತಿರುವ ಮತ್ತು ಮುಂದೆ ಮಾಡುವ ಎಲ್ಲವನ್ನೂ ಬಾಕಿ ಉಳಿಯದಂತೆ ಕ್ಷಮಿಸು.

ಆತ್ಮದ ಹಾಗೂ ಈ ಸಮಸ್ತ ಜಗತ್ತಿನ ವಿಷಯದ ಕುರಿತಂತೆ ಅನಾದಿಕಾಲದಿಂದಲೂ ತಪ್ಪು ತಿಳಿವಳಿಕೆ ವ್ಯಾಪಕವಾಗಿ ಇದೆ. ಅಂತಹ ಅಜ್ಞಾನವನ್ನೂ, (ನನ್ನ ಮತ್ತು ನನ್ನ ಹೆಂಡಿರು ಮಕ್ಕಳ) ಎಲ್ಲರ ವಿಷಯದಲ್ಲೂ ಹಿಂದೆ ಮಾಡಿದ, ಈಗಲೂ ಮಾಡುತ್ತಿರುವ ಮತ್ತು ಮುಂದೆ ಮಾಡುವ (ಆತ್ಮಹಿತಕ್ಕೆ) ವಿರುದ್ಧವಾದ ಎಲ್ಲ ಕಾಮ್ಯಕರ್ಮಗಳನ್ನೂ ಕ್ಷಮಿಸು.

ಅಂತ್ಯಕಾಲದಲ್ಲಿ ನಿನ್ನ ನಿತ್ಯಕೈಂಕರ್ಯವುಂಟುಮಾಡುವ (ನಿನ್ನ ಕೃಪೆಯಿಂದಲೇ ಆಗುವ) ಯಾವ (ನಾರಾಯಣ) ಸ್ಮೃತಿಯುಂಟೋ, ಅದನ್ನು ನನಗೆ ಈಗಿನಿಂದಲೇ ಉಂಟಾಗುವಂತೆ ಮಾಡಪ್ಪ, ಪ್ರಭು!

---

## ಸೂಕ್ತಿಪ್ರಭ

- ಜನ ಅಧಿಕ ಶ್ರಮದಿಂದ ಸಾಯುತ್ತಾರೆ ಎಂಬುದನ್ನು ನಾನು ನಂಬುವುದಿಲ್ಲ. ಅವರು ನಿಷೇಧಾತ್ಮಕ ಭಾವನೆಗಳಾದ ಒತ್ತಡ, ಚಿಂತೆ ಹಾಗೂ ಭಯಗಳಿಂದ ಸಾಯುತ್ತಾರಷ್ಟೆ. ಸತ್ಯ ಹೇಳಬೇಕೆಂದರೆ ನಮ್ಮ ಸಮಾಜದಲ್ಲಿ ಇಂದಿನ ದಿನಗಳಲ್ಲಿ ಅನೇಕರಿಗೆ ಶ್ರಮವಹಿಸಿ ಕೆಲಸ ಮಾಡುವುದೇನೆಂಬುದೇ ತಿಳಿದಿಲ್ಲ. —ಎ.ಎಲ್. ವಿಲಿಯಮ್ಸ್
- ಎಲ್ಲೆಡೆ, ಎಲ್ಲರಲ್ಲಿ, ಎಲ್ಲ ವಸ್ತುಗಳಲ್ಲೂ ದೇವರನ್ನು ಕಾಣಲು ಪ್ರಯತ್ನಿಸಿ, ಆಗ ನಿಮ್ಮ ಪ್ರಪಂಚದಲ್ಲಿ ಎಲ್ಲವೂ ಚೆನ್ನಾಗಿರುತ್ತದೆ. —ಲೂಯಿಸ್ ಹೇ
- ಪ್ರಾರ್ಥನೆಯೆಂದರೆ ಬೇಡುವುದಲ್ಲ. ಅದು ಅಂತರಂಗದಲ್ಲಿರುವ ಆತ್ಮದ ತೀವ್ರ ತುಡಿತ. —ಮಹಾತ್ಮ ಗಾಂಧಿ
- ನಾನು ಏನಾಗಿರುವೆನೋ ಅಥವಾ ಮುಂದೊಮ್ಮೆ ಏನು ಆಗಬಯಸುವೆನೋ, ಅದೆಲ್ಲದಕ್ಕೂ ದೈವಸ್ವರೂಪಿಯಾದ ನನ್ನ ತಾಯಿಗೆ ನಾನು ಋಣಿ. —ಅಬ್ರಹಾಂ ಲಿಂಕನ್
- ಹುಟ್ಟು ಸುಖಮಯ. ಸಾವು ಕೂಡ ಶಾಂತಿಯ ಸ್ಥಿತಿ. ಇವೆರಡರ ನಡುವೆ ನಾವು ಮಾಡುವ ಪಯಣ ಮಾತ್ರ ಗೊಂದಲಮಯ ಸ್ಥಿತಿ. —ಐಸಾಕ್ ಅಸಿಮೋವ್
- ಯಾರು ತೀವ್ರವಾಗಿ ಪ್ರೀತಿಸುವರೋ, ಅವರಿಗೆ ಇಡಿಯ ಜಗತ್ತೇ ನಗುತ್ತಿರುವಂತೆ ತೋರುತ್ತದೆ. —ಡೇವಿಡ್ ಮೈಯರ್ಸ್
- ನಮ್ಮ ಆತ್ಮವನ್ನು ತಿಳಿಯಲು ಪ್ರಯತ್ನಿಸುವುದರಿಂದ ದೊರೆಯುವ ಫಲಗಳೆಂದರೆ—ಪ್ರೀತಿ, ಆನಂದ, ಶಾಂತಿ, ತಾಳ್ಮೆ, ಅನುಕಂಪೆ, ಒಳ್ಳೆಯತನ, ನಿಷ್ಠೆ, ಮಾರ್ದವತೆ ಹಾಗೂ ಸಂಯಮ. —ಬೈಬಲ್
- ಸತ್ಯವು ಒಂದು ಪರೋಕ್ಷ ಸೂಚನೆಯಷ್ಟೆ. ಆದರೆ ಮತ್ತೆ ಮತ್ತೆ ಗಾಢವಾಗಿ ಉಳಿಯುವ ಸೂಚನೆ. —ಆಲ್ಬರ್ಟ್ ಐನ್‌ಸ್ಟೈನ್
- ನಿನ್ನ ಜೀವನವು ಎಲೆತುದಿಯಂತೆ ಕಾಲದ ಅಂಚಿನಲ್ಲಿ ಹಗುರಾಗಿ ಕುಣಿಯುತ್ತಿರಲಿ. —ರವೀಂದ್ರನಾಥ ಠಾಕೂರ್